ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್
ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 30॥ UDP/1263/2018-20 || R.NO.50495/91 ॥ ತಾರೀಕು : 04–09–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಕುಂದಾಪುರ ಪುರಸಭೆ: ಬಿಜೆಪಿಗೆ ಬಹುಮತ

## ಬಿಜೆಪಿ–14 , ಕಾಂಗ್ರೆಸ್–8, ಪಕ್ಷೇತರ–1



ಗೆಲುವಿನ ಸಂತಸದೊಂದಿಗೆ ಮಿನಿವಿಧಾನಸೌಧದಿಂದ ಹೊರಬರುತ್ತಿರುವ ಬಿಜೆಪಿ ಪುರಸಭಾ ಸದಸ್ಯರು



ಜಯದ ನಗುವಿನೊಂದಿಗೆ ಕಾಂಗ್ರೆಸ್ ಸದಸ್ಯರು ಚುನಾವಣಾ ಎಣಿಕೆ ಕೇಂದ್ರದಿಂದ ಹೊರಬರುತ್ತಿರುವುದು

ಕುಂದಾಪುರ ಪುರಸಭಾ ಚುನಾವಣೆಯಲ್ಲಿ ಬಿಜೆಪಿ ಕಾಂಗ್ರೆಸ್ ನಡುವೆ ನಡೆದ ಜಿದ್ದಾಜಿದ್ದಿನ ಹೋರಾಟದಲ್ಲಿ ಬಿಜೆಪಿ 14 ಸ್ಥಾನ ಪಡೆದಿದ್ದು ಕಾಂಗ್ರೆಸ್ 8 ಸ್ಥಾನ ಪಡೆದಿದೆ. ಪಕ್ಷೇತರರಾಗಿ ಸ್ಪರ್ಧಿಸಿದ್ದವರಲ್ಲಿ ಓರ್ವ ಮಹಿಳಾ ಅಭ್ಯರ್ಥಿ ಜಯ ಸಾಧಿಸಿದ್ದಾರೆ.

ಚುನಾವಣಾ ಫಲಿತಾಂಶ ಬಹಳ ಕುತೂಹಲಕರವಾಗಿದ್ದು ಸೆಂಟ್ರಲ್ ವಾರ್ಡ್‌ನತ್ತ ಹೆಚ್ಚಿನವರ ಗಮನ ಹರಡಿತ್ತು. ಅದೂ ಬಿಜೆಪಿಯೊಳಗಿನ ಸ್ನೇಹಿತರ ಸ್ಪರ್ಧೆ. ಕೊನೆಗೂ ಜಿದ್ದಾಜಿದ್ದಿ ಸ್ಪರ್ಧೆಯಲ್ಲಿ ಮಾಜಿ ಅಧ್ಯಕ್ಷ ಕೆ. ಮೋಹನದಾಸ್ ಶೆಣೈ ಗೆಲುವಿನ ನಗು ಬೀರಿದರು. ನಿಕಟಪೂರ್ವ ಉಪಾಧ್ಯಕ್ಷ ರಾಜೇಶ್ ಕಾವೇರಿ ಸೋತರು.

ಆದರೆ ವಿಶೇಷವೆಂದರೆ ಬಿಜೆಪಿ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಹಿರಿಯ ಸದಸ್ಯರ ಸೋಲು. ಕೋಡಿಯಲ್ಲಿ ಮಾಜಿ ಅಧ್ಯಕ್ಷೆ ಗುಣರತ್ನ, ಖಾರ್ವಿಕೇರಿಯಲ್ಲಿ ನಿಕಟಪೂರ್ವ ಅಧ್ಯಕ್ಷೆ ವಸಂತಿ ಸಾರಂಗ, ಮೀನು ಮಾರುಕಟ್ಟೆ ವಾರ್ಡ್‌ನಲ್ಲಿ ಮಾಜಿ ಉಪಾಧ್ಯಕ್ಷ ನಾಗರಾಜ್ ಕಾಮಧೇನು, ಫೆರ್ರಿ ವಾರ್ಡ್‌ನಲ್ಲಿ ಮಾಜಿ ಸದಸ್ಯೆ ಪುಷ್ಪಾಶೇಟ್ ಇವರೆಲ್ಲ ಸೋತರೂ ಬಿಜೆಪಿ 14 ಸ್ಥಾನ ಗಳಿಸಿ ಬಹುಮತ ಪಡೆದಿದೆ.

ಈ ಹಿಂದೆ ಬಹಳ ಪೈಪೋಟಿ ನೀಡುತ್ತಿದ್ದ ಸಿಪಿಐ(ಎಂ) ಒಂದೇ ಒಂದು ಸ್ಥಾನಗೆಲ್ಲದಿರುವುದು ಪಕ್ಷಕಕ್ಕೆ ಆಘಾತ ನೀಡಿದೆ. ಸಿಪಿಐ(ಎಂ) ವಾರ್ಡ್‌ಗಳೆಂದೇ ಹೆಸರುವಾಸಿಯಾದ ಕ್ಷೇತ್ರಗಳೆಲ್ಲವೂ ಬಿಜೆಪಿ ಪಾಲಾಗಿದೆ.

ಕಾಂಗ್ರೆಸ್‌ನ ಹಿರಿಯ ಸದಸ್ಯರಲ್ಲಿ ಮಾಜಿ ಅಧ್ಯಕ್ಷೆ ದೇವಕಿ ಸಣ್ಣಯ್ಯ ಮಾಜಿ ಸದಸ್ಯರಾದ ಶ್ರೀಧರ ಶೇರೆಗಾರ್, ಚಂದ್ರಶೇಖರ ಖಾರ್ವಿ ಹಾಗೂ ಕೆ.ಜಿ. ನಿತ್ಯಾನಂತ ಜಯಗಳಿಸಿದ್ದು ಕಾಂಗ್ರೆಸ್‌ಗೆ ಬಲ ತಂದಿದೆ.

ಹಲವು ಪಕ್ಷದೊಳಗಿನ ಒಳಪೆಟ್ಟುಗಳು ಕೆಲವು ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿದ್ದು ಮೋಹನ್‌ದಾಸ್ ಶೆಣೈ ಸ್ವಲ್ಪದರಲ್ಲಿಯೇ ಪಾರಾಗಿ ಜಯಸಾಧಿಸಿದರು.

ಇಂದು ಮಿನಿವಿಧಾನ ಸಭೆಯಲ್ಲಿ ಮುಂಜಾನೆ 8 ಗಂಟೆಯಿಂದ ಮತ ಎಣಿಕೆ ನಡೆಯುತ್ತಿದ್ದಾಗ ಪಕ್ಷದ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಹೊರಗೆ ನೆರೆದಿದ್ದು ತಮ್ಮ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿದ ಸುದ್ದಿ ತಿಳಿದೊಡನೆ ಸಂಭ್ರಮ ವ್ಯಕ್ತಪಡಿಸಿದರು.

ಗೆಲುವುಗಳಿಸಿದ ಅಭ್ಯರ್ಥಿಗಳು ನಂತರ ಸಾರ್ವಜನಿಕವಾಗಿ ಕಾರ್ಯಕರ್ತರೊಡನೆ ಪುರರಸ್ತೆಯಲ್ಲಿ ತಿರುಗಾಡಿ ಸಂತಸ ವ್ಯಕ್ತಪಡಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಅಗತ್ಯ ಬಂದೋಬಸ್ತು ಮಾಡಲಾಗಿತ್ತು.

## ಬಿಗ್ ಫೈಟ್‌ನಲ್ಲಿ ಮೋಹನ್‌ದಾಸ್ ಶೆಣೈ ಗೆಲುವು



ಮಾಜಿ ಪುರಸಭಾ ಅಧ್ಯಕ್ಷ ಕೆ.ಮೋಹನ್ ದಾಸ್ ಶೆಣೈಯವರ ಎದುರು ಪಕ್ಷೇತರ ಅಭ್ಯರ್ಥಿಯಾಗಿ ನಿಕಟಪೂರ್ವ ಪುರಸಭಾ ಉಪಾಧ್ಯಕ್ಷ ರಾಜೇಶ್ ಕಾವೇರಿ ಸ್ಪರ್ಧಿಸಿ ಸವಾಲು ಒಡ್ಡಿದ್ದರಿಂದ ಈ ಕ್ಷೇತ್ರದ ಫಲಿತಾಂಶ ಬಹಳ ಕುತೂಹಲ ಕೆರಳಿಸಿತ್ತು. ರಾಜೇಶ್ ಕಾವೇರಿ ವಿವಿಧ ರೀತಿಯಲ್ಲಿ ತನ್ನ ಗೆಲುವಿಗಾಗಿ ಬಹಳ ಪ್ರಯತ್ನ ಪಟ್ಟರೂ ಮತದಾರರು ಮೋಹನ್‌ದಾಸ್ ಶೆಣೈಯವರಿಗೆ ಗೆಲುವಿನ ಮತನೀಡಿ ಬಿಜೆಪಿಗೆ ಸಂತಸ ಉಂಟುಮಾಡಿದರು.

## ಕೊಡಗು ಸಂತ್ರಸ್ತರ ನೆರವಿಗೆ ನೇರಂಬಳ್ಳಿ ರಾಘವೇಂದ್ರ ರಾವ್ ಅವರಿಂದ ಒಂದು ಲಕ್ಷ ರೂ ದೇಣಿಗೆ



ಪ್ರಕೃತಿ ವಕೋಪದಿಂದ ಬಹಳಷ್ಟು ಕಷ್ಟನಷ್ಟ ಅನುಭವಿಸಿರುವ ಕೊಡಗಿನ ಜನಜೀವನದ ಅಭಿವೃದ್ಧಿಗಾಗಿ ಕುಂದಾಪುರದ ಎನ್‌ಆರ್ಸ್ ನಂದಿನಿ ಹೋಟೆಲ್ ಮಾಲಕ, ಕೋಟೇಶ್ವರ ಚೇತನ ಸಂಸ್ಥೆಯ ಗೌರವಾಧ್ಯಕ್ಷ ನೇರಂಬಳ್ಳಿ ರಾಘವೇಂದ್ರ ರಾವ್ 1 ಲಕ್ಷ ರೂ ದೇಣಿಗೆ ನೀಡಿದರು.

ಕುಂದಾಪುರದ ಉಪವಿಭಾಗಾಧಿಕಾರಿ ಭೂಬಾಲನ್ ಅವರಿಗೆ ಮುಖ್ಯಮಂತ್ರಿಗಳ ಪರಿಹಾರನಿಧಿ ಪ್ರಕೃತಿ ವಿಕೋಪ 2018 . ಖಾತೆಗೆ ಚೆಕ್ ಹಸ್ತಾಂತರಿಸಿದರು. ನೆರವು ನೀಡಿದ ದಾನಿ ಎನ್.ರಾಘವೇಂದ್ರ ರಾವ್ ಅವರನ್ನು ಭೂಬಾಲನ್ ಅಭಿನಂದಿಸಿದರು.

ಕೋಟೇಶ್ವರ ಹೂವಿನಕೆರೆ ವಾದಿರಾಜ ಮಠ ಸಮಿತಿಯ ಅಧ್ಯಕ್ಷರೂ, ಶ್ರೀಕೋಟಿಲಿಂಗೇಶ್ವರ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಸದಸ್ಯರೂ ಆಗಿರುವ ಎನ್.ರಾಘವೇಂದ್ರ ರಾವ್ ಜಲಪ್ರಳಯದಿಂದ ತತ್ತರಿಸುವ ಕೇರಳದ ಜನರ ನೆರವಿಗಾಗಿಯೂ ತಾನು ಸ್ಪಂದಿಸಿದ್ದೇನೆ. ನಮ್ಮಸೊಬಗಿನ ಕೊಡಗಿನ ವೀರ ಯೋಧರ ನಾಡಲ್ಲಿ ಆಗಿರುವ ಅನಾಹುತ ಕಂಡು ದುಃಖಗೊಂಡಿದ್ದೇನೆ"ಎಂದರು.

ಎನ್.ರಾಘವೇಂದ್ರ ರಾವ್ ಅವರೊಂದಿಗೆ ಚೇತನ ಸಂಸ್ಥೆಯ ಕಾರ್ಯದರ್ಶಿ ಗಣೇಶ ಐತಾಳ್, ಚಿಂತಕ ಸದಾನಂದ ಸ್ವಾಮಿ, ಇಂಜಿನಿಯರ್ ಗುರುರಾಜ್, ಸಮಾಜ ಸೇವಕ ಗೋವಿಂದ ಗೋಟ, ಕುಂದಪ್ರಭ ಸಂಸ್ಥೆಯ ಅಧ್ಯಕ್ಷ ಯು.ಎಸ್.ಶೆಣೈ, ಸ್ಮೈಲ್ ಟಿವಿಯ ಸತೀಶ್ ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

## ಸಹಾಯ ಮಾಡಲು ಹೋಗಿ ಸಂಕಟ ಅನುಭವಿಸಿದ ಶಂಕರ ಪೂಜಾರಿ



ಮಾನವೀಯ ದೃಷ್ಟಿಯಿಂದ ಬೇರೆಯವರ ಪಾರ್ಸೆಲ್‌ನ್ನು ಕುವೈಟ್‌ಗೆ ಕೊಂಡು ಹೋದ ಶಂಕರ ಪೂಜಾರಿ ಬಸ್ರೂರು ಅವರ ಪ್ರಕರಣ ಈಗ ಬಹಳ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ.

ಕೊಲ್ಲಿ ರಾಷ್ಟ್ರಗಳಲ್ಲಿ ನಿಷೇಧಿತವಾದ ನೋವು ನಿವಾರಕ ಔಷಧ (ಮಾತ್ರೆ) ಆಲ್ಟ್ರಾಸಿಟ್‌ನ್ನು ಮಾಹಿತಿ ಕೊರತೆಯಿಂದ ಕುವೈಟ್‌ಗೆ ಕೊಂಡು ಹೋಗಿದ್ದ ಕುಂದಾಪುರ ತಾಲೂಕಿನ ಬಸ್ರೂರು ನಿವಾಸಿ ಶಂಕರ ಪೂಜಾರಿ(40) ಅವರನ್ನು ಕುವೈಟ್ ಪೋಲಿಸರು ಬಂಧಿಸಿ 3 ತಿಂಗಳಿಂದ ಕುವೈಟ್‌ನ ಸಿಲಾಬಿಯಾ ಪಬ್ಲಿಕ್ ಜೈಲಿನಲ್ಲಿ ಬಂಧಿಸಿ ಇಟ್ಟಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ.

ಶಂಕರ ಪೂಜಾರಿ ಅವರ ಪತ್ನಿ ಜ್ಯೋತಿ ನೀಡಿದ ಮನವಿಯಂತೆ ಉಡುಪಿಯ ಮಾನವ ಹಕ್ಕುಗಳ ರಕ್ಷಣಾ ಪ್ರತಿಷ್ಠಾನ ನಡೆಸಿದ ತನಿಖೆಯ ವೇಳೆ ವಿಷಯ ಅರಿವಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ। ರವೀಂದ್ರನಾಥ ಶಾನುಭಾಗ್ ತಿಳಿಸಿದ್ದಾರೆ.

ಕುವೈಟ್‌ನ ಕಂಪೆನಿಯೊಂದರಲ್ಲಿ 4 ವರ್ಷಗಳಿಂದ ಉದ್ಯೋಗಿಯಾಗಿದ್ದ ಶಂಕರ ಪೂಜಾರಿ 3 ತಿಂಗಳ ಹಿಂದೆ ಊರಿಗೆ ಬಂದಿದ್ದರು. ವಾಪಾಸಾಗುವಾಗ ಕುವೈಟ್‌ನ ನಿವಾಸಿಯಾಗಿರುವ ತಸ್ಲೀಮಾ ಫಾತಿಮಾ (45) ಎಂಬವರ ಅಳಿಯ ಉಡುಪಿ ನಿವಾಸಿ ಮುಬಾರಕ್ ಎಂಬಾತ ಮಾತ್ರೆಗಳ ಪ್ಯಾಕೆಟನ್ನು ತನ್ನ ಅತ್ತೆಗೆ ತಲುಪಿಸಲು ಶಂಕರ ಪೂಜಾರಿ ಅವರಿಗೆ ಮುಂಬಯಿಗೆ ತೆರಳುವ ಒಂದು ದಿನ ಹಿಂದೆಯಷ್ಟೇ ನೀಡಿದ್ದರು.

ಆದರೆ ಶಂಕರ್ ಕುವೈಟ್‌ನಲ್ಲಿ ಇಳಿದಾಗ ಅಲ್ಲಿನ ಪೋಲಿಸರು ತಪಾಸಣೆ ನಡೆಸಿ ಬಂಧಿಸಿ ಸಿಲಾಬಿಯಾ ಪಬ್ಲಿಕ್ ಜೈಲಿಗೆ ವರ್ಗಾಹಿಸಿದ್ದರು.

ಜು. 13 ರಂದು ಶಂಕರ ಪೂಜಾರಿ ಕುವೈಟ್‌ನಿಂದ ಪತ್ನಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು, ತಾನು ಊರಿನಿಂದ ಹೊರಡುವಾಗ ಮುಬಾರಕ್ ಕೊಟ್ಟ ಔಷಧಿ ಪ್ಯಾಕೆಟ್ ತನ್ನ ಬಂಧನಕ್ಕೆ ಕಾರಣ ಎಂದು ತಿಳಿಸಿದ್ದರು. ಬಂಧನದ ಬಳಿಕ ಶಂಕರ ಪೂಜಾರಿ 3 ಬಾರಿ ಫಾತಿಮಾರನ್ನು ಸಂಪರ್ಕಿಸಿ ಸಹಾಯಕ್ಕೆ ಮೊರೆ ಇಟ್ಟರೂ ಅವರು ಸಮಸ್ಯೆಯಿಂದ ಪಾರು ಮಾಡಲು ಪ್ರಯತ್ನ ನಡೆಸಲಿಲ್ಲ ಎಂದು ಡಾ। ಶಾನುಭಾಗರು ತಿಳಿಸಿದ್ದಾರೆ.

ಭಾರತೀಯ ರಾಯಭಾರಿ ಕಚೇರಿ ಮೂಲಕ ಈ ಪ್ರಕರಣ ಸರಿಪಡಿಸಿ ಶಂಕರ ಪೂಜಾರಿ ಬಿಡುಗಡೆಗೊಳಿಸಲು ಸಂಸದರು, ವಿದೇಶ ಸಚಿವಾಲಯ ಸಹಿತ ಹಲವರು ಪ್ರಯತ್ನ ನಡೆಸುತ್ತಿದ್ದಾರೆಂದು ತಿಳಿದು ಬಂದಿದೆ. ಕುವೈಟ್‌ನಲ್ಲಿ ಇರುವ ಕಠಿಣ ಕಾನೂನು ಈ ಸಮಸ್ಯೆಗೆ ಕಾರಣವಾಗಿದೆ.